**ವ್ಯಾಖ್ಯಾನ** Date: 09.06.2025

# <u>ಗಜ – ತುರಗ ಸಹಸ್ರ ದಾನ</u>

ಉಗಾಭೋಗದ ಚಿಂತನೆ:

> **ಗಜ – ತುರಗ ಸಹಸ್ರ ದಾನ**
>
> **ಗೋಕುಲ ಕೋಟಿ ದಾನ**
>
> **ಭೂದಾನ ಸಮುದ್ರ ಪರ್ಯಂತರ**
>
> **ದಾನಿ ಪುರಂದರ ವಿಠಲನ ಧ್ಯಾನಕ್ಕೆ ಸಮವಿಲ್ಲ**

**"ದಾನಂ ಧ್ರುವಂ ಫಲತಿ ಪಾತ್ರಗುಣಾನುಕೂಲ್ಯಾತ್"** ಎನ್ನುವಂತೆ ಸತ್ಪಾತ್ರರಿಗೆ ಮಾಡಿದ ದಾನ ಅವಶ್ಯ ಫಲ ಕೊಡುತ್ತದೆ.

ಎಂಥಾ ಫಲ ಎಂದರೆ, ಸ್ವರ್ಗಾದಿ ಉತ್ತಮ ಲೋಕಗಳಲ್ಲಿ ಭೋಗವನ್ನು ಕೊಡುತ್ತದೆ. ಮತ್ತು ಸಾಧನೆಗೆ ಅಡ್ಡಿಯಾದ ಪಾಪಗಳನ್ನು ಕಳೆದು ಅಂಥಕರಣ ಶುದ್ದ ಮಾಡಿ ಸಾಧನ ಮಾಡಿಸಿ, ಉತ್ತಮ ಗತಿ ನೀಡುತ್ತದೆ.

**ಉದಾ :--**

ಮಧ್ವಾಚಾರ್ಯರು ಪೂರ್ವಾಶ್ರಮದಲ್ಲಿ ಚಿಕ್ಕ ಬಾಲಕರಾಗಿದ್ದಾಗ, ಮುಡಿಲ್ಲಾಯ ಎನ್ನುವ ವಯಸ್ಸಾದ ಬ್ರಾಹ್ಮಣರೊಬ್ಬರು ಮಧ್ಯಗೇಹ ಭಟ್ಟರಿಗೆ ಗೋದಾನ ಮಾಡಿದರು.

ವಾಯುದೇವರ ಅವತಾರಿಗಳೆಂದರೆ ಸಾಮಾನ್ಯವಾಯಿತೆ?

ಜೀವೋತ್ತಮರಿಗೆ ದಾನ ಮಾಡಿದ ಪುಣ್ಯ ಅವರಿಗೆ ಮುಂದಿನ ಜನ್ಮದಲ್ಲಿ (ತಮ್ಮ ಮಗನಿಗೆ ಮಗನಾಗಿ ಜನಿಸಿ) ಮಧ್ವರಿಂದಲೇ ಶಾಸ್ತ್ರ ಪಾಠ ಕೇಳುವ ಸೌಭಾಗ್ಯ ಪಡೆದು ಉದ್ಧಾರವಾದರು.

ಹೀಗೆ ಜೀವೋತ್ತಮರಿಗೆ ಗೋದಾನ ಮಾಡಿದರೂ ನೇರವಾಗಿ ಭಗವದ್ದರ್ಶನವಾಗಲಿಲ್ಲ.  ಶಾಸ್ತ್ರ ಪಾಠ ಕೇಳಿ, ಜ್ಞಾನ ಪಡೆದು ಉದ್ಧಾರವಾದರು.

ಹಾಗೆಯೇ ಈ ಉಗಾಭೋಗದಲ್ಲಿ ತಿಳಿಸಿದಂತೆ ಆನೆ, ಕುದುರೆ, ಭೂಮಿ ಮೊದಲಾದವುಗಳ ದಾನಗಳೂ ಕೂಡ ನೇರವಾಗಿ ಅಪರೋಕ್ಷಕ್ಕೆ ಕಾರಣವಾಗುವುದಿಲ್ಲವಾದ್ದರಿಂದ ಅಪರೋಕ್ಷಕ್ಕೆ ಕಾರಣವಾಗುವ ಧ್ಯಾನವೇ ಉತ್ತಮ ಸಾಧನ ಎನಿಸಿಕೊಳ್ಳುತ್ತದೆ.

**"ಧ್ಯಾನಂ ನಿಶ್ಚಿತ ತತ್ವಶ್ಚ"** ಎನ್ನುವುದು ಶಾಸ್ತ್ರ ವಚನ

"ನಿಶ್ಚಿತ ತತ್ವ" ಎಂದರೆ ಸ್ವತಂತ್ರನಾದ ಭಗವಂತ.

ಧ್ಯಾನವೆಂದರೆ ಶಾಸ್ತ್ರ ಶ್ರವಣ, ಮನನಾದಿಗಳಿಂದ ಬಂದ ಜ್ಞಾನದಿಂದ ಕಲ್ಪಿಸಿಕೊಂಡ ಮನೋಮಯ ರೂಪದ ಚಿಂತನೆ.  ಅದೇ ತಪಸ್ಸು ಎನಿಸಿಕೊಳ್ಳುತ್ತದೆ.

ನಿರಂತರ ಶಾಸ್ತ್ರ ಚಿಂತನೆಯೂ ಧ್ಯಾನ ಎನಿಸಿಕೊಳ್ಳುತ್ತದೆ.

ಒಮ್ಮೆ ಧ್ಯಾನದಲ್ಲಿ ದೇವರನ್ನು ಕಂಡರೆಂದರೆ ಆಗುವ ಆನಂದ ಅವರ್ಣನೀಯವಂತೆ.  ಮತ್ತೆ ಮತ್ತೆ ಆ ರೂಪದ ದರ್ಶನಕ್ಕೆ ಹಂಬಲಿಸುವಂತಾಗುವುದು.

ಋಷಿಗಳು,ದೇವತೆಗಳು ಆ ರೂಪವನ್ನೇ ಎಲ್ಲೆಡೆ ಕಾಣುವ ಯೋಗ್ಯತೆಯವರು.

**"ಜ್ಞಾನಾತ್ ಧ್ಯಾನ ವಿಶೇಷ್ಯತೆ."** ಜ್ಞಾನಕ್ಕಿಂತಲೂ ಮಿಗಿಲಾದದ್ದು ಧ್ಯಾನ.

ನೇರ ಭಗವದ್ದರ್ಶನಕ್ಕೆ ಕಾರಣವಾಗುವುದರಿಂದ ಮತ್ತು ದಾನ ಕ್ರಮೇಣ ಅಂಥಕರಣ ಶುದ್ಧಿದ್ವಾರಾ ಸಾಧನೆಗೆ ಕಾಣವಾಗುವುದರಿಂದ ಶ್ರೀ ಪುರಂದರ ದಾಸರು ಯಾವುದೇ ಉತ್ತಮ ವಸ್ತುವಿನ ದಾನವೂ ಧ್ಯಾನಕ್ಕೆ ಸಮವಲ್ಲ ಎನ್ನುತ್ತಾರೆ.

ಶ್ರೀ ಜಗನ್ನಾಥದಾಸರು ಹೇಳುವಂತೆ --

ನಿನ್ನ ಸರ್ವತ್ರದಲಿ ನೆನೆವವರನ್ಯ ಕರ್ಮವ ಮಾಡಿದರು ಸರಿ ಪುಣ್ಯ ಕರ್ಮಗಳೆನಿಸುವವು ಸಂದೇಹವಿನಿತಿಲ್ಲ/

ನಿನ್ನ ಸ್ಮರಿಸದೆ ಸ್ನಾನ ಜಪ ಹೋಮಾನ್ನ ವಸ್ತ್ರ ಗಜಾಶ್ವ ಭೂ ಧನ ಧಾನ್ಯ ಮೊದಲಾದಖಿಲ ದಾನವ ಮಾಡಿ ಫಲವೇನು"

ಹರಿಯನ್ನು ಸರ್ವತ್ರದಲಿ ನೆನೆವವರು ಎಂದರೆ ಅಪರೋಕ್ಷಿಗಳು ಎಂದರ್ಥ. ಅದು ಧ್ಯಾನ ಮಾತ್ರದಿಂದಲೇ ಲಭ್ಯ.

**ಶ್ರೀ ಕೃಷ್ಣಾರ್ಪಣಮಸ್ತು**

**ಲೇಖಕರು:** ಸೌ. ಚೇತನಾ ವಾಮಾನರಾವ ಕುಲಕರ್ಣಿ, ವಿಜಯಪುರ, ಕರ್ನಾಟಕ